**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂಃ 640/2016 ಸಿಡಬ್ಲೂ: 5 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 06-11-2025

ಹೆಸರು : ಅಲ್ಲಾವುದ್ದೀನ್

ತಂದೆ ಹೆಸರು : ಬಂದೇಲಿ ಖಾನ್

ವಯಸ್ಸು : 40 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ತೆಲಕೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1, 4, 6 ಮತ್ತು 7 ಗೊತ್ತು. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಪರಿಚಯ. ಸುಮಾರು 09 ವರ್ಷಗಳ ಹಿಂದೆ ಬೆಳಿಗ್ಗೆ 06-00 ಗಂಟೆಗೆ ಚಾ ಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ನಾನು ಚಾ ಸಾ 1 ರವರ ಮನೆಯ ಪಕ್ಕದಲ್ಲಿಂದ ಬೈಹಿರ್ ದೆಸೆಗೆ ಹೋಗುತ್ತಿದ್ದಾಗ ಆರೋಪಿತರು ಮತ್ತು ಚಾ ಸಾ 1 ರವರು ಜಗಳ ಆಡುತ್ತಿದ್ದರು. ಆಗ 2 ನೇ ಆರೋಪಿತನು ಬಡಿಗೆಯಿಂದ ಚಾ ಸಾ 1 ರವರಿಗೆ ಹೋಡೆಯುತ್ತಿದ್ದನು. ಅದೇ ರೀತಿ 3 ನೇ ಆರೋಪಿತನು ಕಲ್ಲಿನಿಂದ ಚಾ ಸಾ 1 ರವರ ತಲೆಗೆ ಹೋಡೆದಿರುತ್ತಾರೆ. ಆಗ ನಾನು ಜಗಳ ಬಿಡಿಸಿಕೊಂಡು ಮನೆಗೆ ಹೋಗಿರುತ್ತೇನೆ. ನಂತರ ಚಾ ಸಾ 1 ರವರು ಆಸ್ಪತ್ರೆಗೆ ಹೋದರು. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ. 09-03-2016 ರಂದು ಬೆಳಿಗ್ಗೆ 06-00 ಗಂಟೆಗೆ ಜಗಳ ಆಗಿತ್ತು. ಸಾಕ್ಷಿಯು ಮುಂದುವರೆದು ನನಗೆ ದಿನಾಂಕ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರೆಲ್ಲಾರು ಚಾ ಸಾ 1 ರವರ ಮನೆಯ ಮುಂದೆ ಇರುವ ಅಂಗಳದಲ್ಲಿ ಬಂದು ಬೋಸಡಿ ಮಗನೆ , ಸೂಳೆ ಮಗನೆ

ಅಂತಾ ಅವಾಚ್ಯವಾಗಿ ಬೈಯುತ್ತಿದ್ದರು ಎಂದರೆ ಸರಿ. ಆಗ  ಆರೋಪಿತನು ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾ ಸಾ 1 ರವರ ತಂದೆ ಮತ್ತು ತಾಯಿ ಜಗಳ ಬಿಡಿಸಲು ಬಂದಾಗ 1 ನೇ ಆರೋಪಿತನು  ಚಾ ಸಾ 1 ರವರ ಸೀರೆ ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ. ಜಗಳ ಬಿಟ್ಟು ಹೋಗುವಾಗ ಆರೋಪಿತರು ಚಾ ಸಾ 1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾನೆ. ಸಾಕ್ಷಿಯು ಮುಯಿವರೆದು ಆರೋಪಿತರು ನನಗೂ ಸಹ ನನ್ನ ವಿರುದ್ದ ಸಾಕ್ಷಿ ಹೇಳಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬಿದರಿಕೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮು ಮಾ 1 ಮತ್ತು 2 ನ್ನು ತೋರಿಸಲಾಗಿ ಸಾಕ್ಷಿಯು ಇದೆ ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಆದರೆ  ಯಾವುದೇ ಸಮಂಜಸ ಕಾರಣನೀಡದೆ ಇರುವುದರಿಂದ ಆರೋಪಿ ಪರ ವಕೀಲರ ವಿನಂತಿಯನ್ನು ತಳ್ಳಿ ಹಾಕಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**